# ಸಿಆರ್‌ಎಸ್ ಆ್ಯಪ್: ಬೆರಳ ತುದಿಗೆ ಜನನ–ಮರಣ ನೋಂದಣಿ

ಜನನ–ಮರಣ ನೋಂದಣಿ ಪತ್ರಕ್ಕಾಗಿ ಸರ್ಕಾರಿ ಕಚೇರಿಗಳಿಗೆ ಇನ್ನು ಮುಂದೆ ಅಲೆದಾಡಬೇಕಿಲ್ಲ. ಆ ಕೆಲಸವೀಗ ಬೆರಳ ತುದಿಯಲ್ಲೇ ಸಲೀಸಾಗಿ ಆಗಲಿದೆ.

**■ ಶಶಿಕುಮಾರ್ ಸಿ.**

ಜನನ ಹಾಗೂ ಮರಣ ನೋಂದಣಿ ಪ್ರಕ್ರಿಯೆಗಾಗಿ ಸಾರ್ವಜನಿಕರು ದಿನಗಟ್ಟಲೆ, ತಿಂಗಳುಗಟ್ಟಲೆ ಸರ್ಕಾರಿ ಕಚೇರಿಗಳ ಬಾಗಿಲಿಗೆ ಅಲೆಯಬೇಕಾದ ವಾತಾವರಣವಿದೆ. ಸಾರ್ವಜನಿಕರ ಈ ಅಲೆದಾಟಕ್ಕೆ ಮುಕ್ತಿ ಒದಗಿಸಲು ಕೇಂದ್ರ ಸರ್ಕಾರವು ಈಚೆಗೆ 'ನಾಗರಿಕ ನೋಂದಣಿ ವ್ಯವಸ್ಥೆ' (CRS–Civil Registration System) ಮೊಬೈಲ್ ಆ್ಯಪ್ ಪರಿಚಯಿಸಿದೆ.

ಹೊಸ ಆ್ಯಪ್ ಮೂಲಕ ಸಾರ್ವಜನಿಕರು ಇನ್ನು ಮುಂದೆ ಬೆರಳ ತುದಿಯಲ್ಲೇ ಜನನ–ಮರಣ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಆ್ಯಪ್‌ನಲ್ಲೇ ಪ್ರಮಾಣ ಪತ್ರವನ್ನೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ನೋಂದಣಿ ಪತ್ರದಲ್ಲಿನ ಬದಲಾವಣೆಗಳನ್ನೂ ಇದರ ಮೂಲಕವೇ ಮಾಡಬಹುದು.




ನಾಗರಿಕ ನೋಂದಣಿ ವ್ಯವಸ್ಥೆ ಮೊಬೈಲ್ ಆ್ಯಪ್ ಅನ್ನು ಭಾರತ ರಿಜಿಸ್ಟ್ರಾರ್ ಜನರಲ್ ಹಾಗೂ ಜನಗಣತಿ ಆಯುಕ್ತಾಲಯ ಅಭಿವೃದ್ಧಿಪಡಿಸಿದೆ. ಇದರಿಂದ ಜನನ ಹಾಗೂ ಮರಣ ನೋಂದಣಿಗೆ ಸದ್ಯ ತೆಗೆದುಕೊಳ್ಳುತ್ತಿರುವ ಸಮಯ ಗಣನೀಯವಾಗಿ ಕಡಿಮೆಯಾಗಲಿದೆ.

ಆ್ಯಪ್ ಬಿಡುಗಡೆ ಬಳಿಕ ಎಕ್ಸ್‌ನಲ್ಲಿ ಈ ಬಗ್ಗೆ ಪೋಸ್ಟ್ ಮಾಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, 'ಯಾವುದೇ ಸಮಯದಲ್ಲಿ, ಯಾವುದೇ ಸ್ಥಳದಿಂದ ಮತ್ತು ಅವರವರ ರಾಜ್ಯದ ಅಧಿಕೃತ ಭಾಷೆಗಳಲ್ಲಿ ಜನನ–ಮರಣ ನೋಂದಾಯಿಸಲು ನಾಗರಿಕರಿಗೆ ಅವಕಾಶ ನೀಡಲು ಈ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ. ಇದರ ಮೂಲಕ ನೋಂದಣಿ ಪ್ರಕ್ರಿಯೆಗೆ ಬೇಕಾದ ಸಮಯವನ್ನು ಈ ಆ್ಯಪ್ ಗಮನಾರ್ಹವಾಗಿ ಕಡಿಮೆ ಮಾಡುತ್ತದೆ' ಎಂದಿದ್ದಾರೆ.

ಆ್ಯಪ್ ಮೂಲಕ ನಾಗರಿಕರು ಜನನ ಹಾಗೂ ಮರಣ ಮತ್ತು ಇದರಲ್ಲಿ ಲಭ್ಯವಿರುವ ಇನ್ನಿತರ ಸೇವೆಗಳ ನೋಂದಣಿಯನ್ನು ಎಲ್ಲಿಂದಲಾದರೂ, ಯಾವಾಗಲಾದರೂ ಮತ್ತು ಆಯಾ ರಾಜ್ಯಗಳ ಭಾಷೆಗಳಲ್ಲೇ ಕೆಲ ನಿಮಿಷಗಳಲ್ಲೇ ನೋಂದಾಯಿಸಬಹುದು. ಸದ್ಯ ಈ ಆ್ಯಪ್ ಆ್ಯಂಡ್ರಾಯ್ಡ್ ಕಾರ್ಯಾಚರಣಾ ವ್ಯವಸ್ಥೆಯ ಮೊಬೈಲ್‌ಗಳಲ್ಲಿ ಮಾತ್ರ ಲಭ್ಯವಿದ್ದು, ಭವಿಷ್ಯದಲ್ಲಿ ಐಒಎಸ್‌ನಲ್ಲೂ ಬರುವ ಸಾಧ್ಯತೆ ಇದೆ.

**ಆ್ಯಪ್ ಬಳಕೆ ಹೇಗೆ?**

- ಗೂಗಲ್ ಪ್ಲೇಸ್ಟೋರ್‌ನಲ್ಲಿ ಆ್ಯಪ್ ಲಭ್ಯವಿದೆ. ಅದನ್ನು ಡೌನ್‌ಲೋಡ್ ಮಾಡಿಕೊಂಡು ಇನ್‌ಸ್ಟಾಲ್ ಮಾಡಬೇಕು.
- ಬಳಕೆದಾರರು ಆ್ಯಪ್‌ನಲ್ಲಿ ಮೊದಲಿಗೆ ನೋಂದಣಿ ಮಾಡಿಕೊಂಡು, ಐಡಿ ಮತ್ತು ಪಾಸ್‌ವರ್ಡ್ ರಚಿಸಿಕೊಳ್ಳಬೇಕು.
- ಲಾಗಿನ್ ಪ್ರಕ್ರಿಯೆ ಪೂರ್ಣಗೊಳಿಸಲು ಆ್ಯಪ್ ಕ್ಯಾಪ್ಚಾ (captcha) ಹಾಗೂ ಮೊಬೈಲ್ ನಂಬರ್ ಕೇಳುತ್ತದೆ. ಅದನ್ನು ಒದಗಿಸಿದ ಬಳಿಕ ಎಸ್‌ಎಂಎಸ್ ಮೂಲಕ ಒಟಿಪಿ ಬರುತ್ತದೆ. ಅದನ್ನು ಆ್ಯಪ್‌ನಲ್ಲಿ ನಮೂದಿಸಿ ಲಾಗಿನ್ ಆಗಬೇಕು.
- ಆ್ಯಪ್‌ಗೆ ಲಾಗಿನ್ ಆದ ಬಳಿಕ ಪರದೆಯ ಹೋಮ್ ಸ್ಕ್ರೀನ್ ಮೇಲಿನ ಎಡಭಾಗದಲ್ಲಿ ಕಾಣುವ ಮೂರು ಡಾಟ್‌ಗಳ ಐಕಾನ್ ಕ್ಲಿಕ್ ಮಾಡಿ.
- ಅಲ್ಲಿ ಕಾಣುವ ಜನನ, ಮರಣ, ದತ್ತು, ಪ್ರೊಫೈಲ್ ಮತ್ತು ಪಾವತಿ ವಿವರಗಳು, ಸೇರಿಸಿ ಅಥವಾ ವೀಕ್ಷಿಸಿ ಹೀಗೆ ಮುಂತಾದ ಆಯ್ಕೆಗಳನ್ನು ಒದಗಿಸುತ್ತದೆ.
- ಜನನ ಪ್ರಮಾಣ ಪತ್ರಕ್ಕಾಗಿ, ಜನನ ಎನ್ನುವ ಆಯ್ಕೆ ಇರುವ ಬಳಿ ಕ್ಲಿಕ್ ಮಾಡಿ, ಕೊಟ್ಟಿರುವ ಸ್ಥಳದಲ್ಲಿ ಮಗುವಿನ ಹುಟ್ಟಿದ ದಿನಾಂಕ, ಹುಟ್ಟಿದ ಸ್ಥಳ, ವಿಳಾಸ ಕುಟುಂಬದ ಮಾಹಿತಿಯನ್ನು ನಮೂದಿಸಬೇಕು.
- ಮರಣ ಪ್ರಮಾಣ ಪತ್ರಕ್ಕಾಗಿ, ಮರಣ ಎನ್ನುವ ಆಯ್ಕೆ ಮೇಲೆ ಕ್ಲಿಕ್ ಮಾಡಿ, ವ್ಯಕ್ತಿ ಮರಣ ಹೊಂದಿದ ದಿನಾಂಕ ಹಾಗೂ ಇತರ ಮಾಹಿತಿಗಳನ್ನು ನಮೂದಿಸಬೇಕು.
- ಬಳಿಕ ನಿಗದಿತ ಹಣ ಪಾವತಿ ಮಾಡಬೇಕು. ಪಾವತಿಯಾಗುತ್ತಿದ್ದಂತೆ, ನೀವು ಸಲ್ಲಿಸಿದ ಮಾಹಿತಿ ಪರಿಶೀಲನೆಗೊಂಡು ಪ್ರಮಾಣಪತ್ರ ಸಿದ್ಧಗೊಳ್ಳುತ್ತದೆ.
- ಆ ಬಳಿಕ ಆ್ಯಪ್‌ನಲ್ಲಿ ಪ್ರಮಾಣಪತ್ರ ಡೌನ್‌ಲೋಡ್ ಮಾಡಿಕೊಳ್ಳಿ.

■

## ಐಒಎಸ್ 18.1

ಐಫೋನ್ 16 ಸರಣಿಯ ಮೊಬೈಲ್‌ಗಳನ್ನು ಬಿಡುಗಡೆ ಮಾಡಿದ ಬೆನ್ನಲ್ಲೇ ಆ್ಯಪಲ್ ಕಂಪನಿಯು ಈಚೆಗೆ ಐಒಎಸ್ 18.1 ಆವೃತ್ತಿಯನ್ನು ಬಿಡುಗಡೆ ಮಾಡಿದೆ. ಇದು ಹಲವಾರು ಹೊಸ ಫೀಚರ್‌ಗಳನ್ನು ಹಾಗೂ ಹೊಸ ಹೊಸ ಅಪ್‌ಡೇಟ್‌ಗಳನ್ನು ಒಳಗೊಂಡಿದೆ. ಐಫೋನ್ 16 ಸರಣಿಯ ಮೊಬೈಲ್‌ಗಳಲ್ಲಿ ಪರಿಚಯಿಸಬೇಕಿದ್ದ ಆ್ಯಪಲ್ ಇಂಟೆಲಿಜೆನ್ಸ್ ಅನ್ನು ಕಾರಣಾಂತರಗಳಿಂದ ಮುಂದೂಡಲಾಗಿತ್ತು.

ಅದನ್ನು ಹೊಸ ಅಪ್‌ಡೇಟ್‌ನಲ್ಲಿ ಪರಿಚಯ ಮಾಡಲಾಗಿದೆ. ರೈಟಿಂಗ್ ಟೂಲ್ಸ್, ಸ್ಮಾರ್ಟರ್ ಸಿರಿ, ರಿಡಿಸೈನ್ಡ್ ಫೋಟೋಸ್ ಅಪ್‌ಡೇಟ್ಸ್ ಅನ್ನು ಇದರಲ್ಲಿ ಮಾಡಬಹುದಾಗಿದೆ. ಇದರ ಜೊತೆಗೆ ಗೇಮ್ ಮೋಡ್, ಕಾಲ್ ರೆಕಾರ್ಡಿಂಗ್, ಕ್ಯಾಮೆರಾ ಕಂಟ್ರೋಲ್, ಟೆಕ್ಸ್ಟ್ ಮೆಸೇಜ್ ಸಮ್ಮರೈಸೇಷನ್, ಸ್ಮಾರ್ಟ್ ರೆಸ್ಪಾನ್ಸ್, ಪ್ರಿಯಾರಿಟೈಜ್ಡ್ ಇಮೇಲ್ ನೋಟಿಫಿಕೇಷನ್ ಫೀಚರ್‌ಗಳನ್ನು ಹೊಸ ಆವೃತ್ತಿಯಲ್ಲಿ ಪರಿಚಯಿಸಿದೆ.